(6ನೇ ಪುಟದಿಂದ)

ಹೊಳೆಯ ಹೆಸರಿನಲ್ಲಷ್ಟೇ ದೇವರ ವಿಶೇಷಣ ತಳಕು ಹಾಕಿಕೊಂಡಿಲ್ಲ. ಹೊಳೆಯ ಸ್ವರೂಪದಲ್ಲೇ ದೈವಿಕ ಬಿಂಬಗಳಿವೆ. ನೀರಿನಲ್ಲಿನ ಕಲ್ಲುಬಂಡೆಗಳ ಮೇಲೆ ದೇವ–ದೇವತೆಯರ ಚಿತ್ತಾರಗಳ ಕೆತ್ತನೆಗಳಿವೆ. ಶಿವಲಿಂಗಗಳಿವೆ, ಬಸವ ಮೂರ್ತಿಗಳ ಕೆತ್ತನೆಗಳೂ ಇವೆ. ನೀರಿನ ಹರಿವೇ ಶಿಲ್ಪಿಯ ಕೆಲಸ ಮಾಡಿವೆ. ಈ ಶಿಲ್ಪಗಳಿಗೆ ನೀರಿನ ಶಾಲ್ಮಲೆಯ ಅಭಿಷೇಕವೂ ಸಲ್ಲುತ್ತದೆ. ಕಲ್ಲಿನ ಮೇಲೆ ಮೂಡಿದ ಈ ದೈವ ಚಿತ್ತಾರಗಳಿಂದಲೂ ಈ ಸ್ಥಳಕ್ಕೆ–ಹೊಳೆಗೆ 'ದೇವರಹೊಳೆ' ಎನ್ನುವ ಹೆಸರು.

ಪ್ರಕೃತಿ ಮೂಡಿಸಿದ ಚಿತ್ತಾರಗಳಿಗೆ ಬಾಗುವ ಮನಸ್ಸನ್ನು ಸುತ್ತಮುತ್ತಲಿನ ಪ್ರಾಕೃತಿಕ ಚೆಲುವೂ ಸೆಳೆಯುತ್ತದೆ. ಮೈಮನಗಳ ಕೊಳೆಯನ್ನೆಲ್ಲ ತೊಳೆಯುವಂತೆ ಹೊಳೆ ನಮ್ಮನ್ನು ಆಹ್ವಾನಿಸುತ್ತದೆ. ಕಾಡಂತೂ ನಮ್ಮ ನೋಟಕ್ಕೆ ಹೊಸ ಕಸುವನ್ನೂ ದಣಿದ ಮನಸ್ಸಿಗೆ ಚೈತನ್ಯವನ್ನೂ ತಂದುಕೊಡಬಲ್ಲಷ್ಟು ಪ್ರಭಾವಶಾಲಿ.

'ದೇವರಹೊಳೆ'ಗೂ ಶಿರಸಿ ಪಟ್ಟಣಕ್ಕೂ ಕೇವಲ ಹದಿನೈದು ಕಿ.ಮೀ. ದೂರ. ಈ ಸ್ಥಳಕ್ಕೆ ತಲುಪಲು ನೀವು ಶಿರಸಿ–ಯಲ್ಲಾಪುರ ರಾಜ್ಯ ಹೆದ್ದಾರಿಯಲ್ಲಿ 10 ಕಿ.ಮೀ. ಸಾಗಿ, ಅಲ್ಲಿಂದ ಬೊಮ್ಮನಳ್ಳಿ ಕ್ರಾಸ್‌ನಲ್ಲಿ ಒಳಕ್ಕೆ 5 ಕಿ.ಮೀ ಪ್ರಯಾಣಿಸಬೇಕು.

ದೇವರ ಹೊಳೆ ಒಂದು ಉತ್ತಮ ಪಿಕ್‌ನಿಕ್ ಸ್ಥಳ. ಇಲ್ಲಿನ ಆಕರ್ಷಕ ಕಲ್ಲು ಬಂಡೆಗಳು, ಬಂಡೆಗಳ ನಡುವೆ ಜುಳುಜುಳು ಹರಿವ ತಿಳಿನೀರ ಹೊಳೆ ಮನಸ್ಸಿಗೆ ಮುದ ನೀಡುತ್ತದೆ. ಅಂದಹಾಗೆ, ಇಲ್ಲಿನ ನೀರಿಗೆ ಕೊಚ್ಚಿಹೋಗುವ ರಭಸವಿಲ್ಲ. ಆ ಕಾರಣದಿಂದಾಗಿಯೇ ನೀರಾಟಕ್ಕಿದು ಪ್ರಶಸ್ತ ಸ್ಥಳ. ಮಕ್ಕಳೊಂದಿಗೆ ಹಿರಿಯರೂ ಮಕ್ಕಳಾಗಲು ಒಳ್ಳೆಯ ಸ್ಥಳ.

ರಜಾ ದಿನಗಳಂದು ನೀರಲ್ಲಿ ಈಜಿನ ಮಜಾ ಅನುಭವಿಸಲೇ ಇಲ್ಲಿಗೆ ಪ್ರವಾಸಿಗರು ಬರುತ್ತಾರೆ. ಕೆಲವರು ಬುತ್ತಿ ಸಿದ್ಧಪಡಿಸಿಕೊಂಡು ತರುತ್ತಾರೆ. ಕೆಲವರು ಸಾಮಾನು ಜೋಡಿಸಿಕೊಂಡು ಬಂದು ಇಲ್ಲಿಯೇ ಅಡುಗೆ ಮಾಡಿಕೊಳ್ಳುವುದಿದೆ. ಕಾಡಿನ ನಡುವೆ ಆಟ, ಊಟ ವಿಶಿಷ್ಟ ಅನುಭವ ನೀಡುತ್ತದೆ. ಬೆಳಗ್ಗೆ ಬಂದವರಲ್ಲಿ ಸಂಜೆಯವರೆಗೂ ಇಲ್ಲಿರುವವರು ಹೆಚ್ಚು. ಒಂದು ದಿನದ ಪಿಕ್ನಿಕ್‌ಗೆ ಇದು ಹೇಳಿಮಾಡಿಸಿದ ಸ್ಥಳ.

ಶಿವರಾತ್ರಿ ದಿನದಂದು 'ದೇವರಹೊಳೆ' ಪ್ರದೇಶ ಜನಜಂಗುಳಿಯಿಂದ ಕಿಕ್ಕಿರಿಯುತ್ತದೆ. ಏಕೆಂದರೆ, ಅಂದಿಲ್ಲಿ ಜಾತ್ರೆಯೇ ಸೇರುತ್ತದೆ. ಸೌಂದರ್ಯದ ಸನ್ನಿಧಿ ಶಿವರಾತ್ರಿಯ ಸಂದರ್ಭದಲ್ಲಿ ಭಕ್ತಿಭಾವದಲ್ಲಿ ಹೊಸ ರಂಗು ಪಡೆದುಕೊಳ್ಳುತ್ತದೆ.

ಅಂದಹಾಗೆ, ದೇವರ ಬಿಂಬಗಳನ್ನು ನೋಡಿ ಇದನ್ನು 'ಸಹಸ್ರಲಿಂಗ' ಎಂದು ಭಾವಿಸಬೇಡಿ. 'ಸಹಸ್ರಲಿಂಗ' ಬೇರೆಯದೇ ಪ್ರವಾಸಿ ಸ್ಥಳ. ಅದು ಇರುವುದು ಕೂಡ ಶಿರಸಿಗೆ ಸಮೀಪದಲ್ಲೇ. ಶಿರಸಿಗೆ ಸುಮಾರು 12 ಕಿ.ಮೀ. ದೂರದಲ್ಲಿ ಸಹಸ್ರಲಿಂಗ ಎನ್ನುವ ಶ್ರದ್ಧಾಕೇಂದ್ರವಿದೆ. ಅಲ್ಲಿ ಕೂಡ ಶಾಲ್ಮಲಾ ನದಿಯೇ ಹರಿಯುತ್ತದೆ. ಶಾಲ್ಮಲಾ ನದಿಯ ಬಂಡೆಗಳ ಮೇಲೆ ಶಿವಲಿಂಗ ಮತ್ತು ನಂದಿಯ ವಿಗ್ರಹಗಳು ಅಲ್ಲಿವೆ. 'ಸಹಸ್ರಲಿಂಗ'ಕ್ಕೆ ಹೋಗುವವರಿಗೆ ಅಲ್ಲಿನ ಲಿಂಗಗಳೇ ಪ್ರಮುಖ ಆಕರ್ಷಣೆ. ಆದರೆ, 'ದೇವರಹೊಳೆ'ಗೆ ಬರುವವರಲ್ಲಿ ಶ್ರದ್ಧಾಭಕ್ತಿಗಿಂತಲೂ ಮಿಗಿಲಾಗಿ ಸೌಂದರ್ಯ ಆಸ್ವಾದನೆಯ ದೃಷ್ಟಿ ಪ್ರಮುಖವಾಗಿರುತ್ತದೆ.

ಮೇಲ್ನೋಟಕ್ಕೆ 'ಸಹಸ್ರಲಿಂಗ'ವನ್ನು 'ದೇವರಹೊಳೆ' ನೆನಪಿಸುತ್ತದೆ. ಎರಡೂ ಸಮೀಪದಲ್ಲಿಯೇ ಇವೆ. ಆದರೆ, ಎರಡರ ಸ್ವರೂಪವೂ ಭಿನ್ನವಾದುದು. 'ಸಹಸ್ರಲಿಂಗ'ಕ್ಕಿರುವ ಜನಪ್ರಿಯತೆ ಸದ್ಯಕ್ಕೆ 'ದೇವರಹೊಳೆ'ಗಿಲ್ಲ. ಆದರೆ 'ದೇವರಹೊಳೆ'ಯ ಚೆಲುವೇನೂ ಕಡಿಮೆಯಾದುದಲ್ಲ.



